ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಚರಿತ್ರೆ ವಿಭಾಗ

**ಪಾಕ್ಷಿಕ ಮಾತು –38**

## ‘ಪಾಳೆಯಗಾರರ ಚರಿತ್ರೆ ದೇಶಿ ಬರವಣಿಗೆಗಳನ್ನು ಅನುಲಕ್ಷಿಸಿ’

ಕನ್ನಡ ವಿಶ್ವವಿದ್ಯಾಲಯ, ಹಂಪಿ **ಚರಿತ್ರೆ ವಿಭಾಗದ** ವತಿಯಿಂದ ದಿನಾಂಕ : 07.10.2024ರಂದು **38ನೇ ಪಾಕ್ಷಿಕ ಮಾತು** ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದಲ್ಲಿ **ಹುಚ್ಚಯ್ಯ ಎಂ.** ಅವರು **‘ಪಾಳೆಯಗಾರರ ಚರಿತ್ರೆ ದೇಶಿ ಬರವಣಿಗೆಗಳನ್ನು ಅನುಲಕ್ಷಿಸಿ’** ಎಂಬ ವಿಷಯವನ್ನು ಮಂಡಿಸಿದರು. ಈ ವಿಷಯ ಕುರಿತು ಪಾಳೆಯಗಾರರ ಚರಿತ್ರೆ ಬರವಣಿಗೆಗೆ ಸ್ಥಳೀಯ ಮತ್ತು ಕರ್ನಾಟಕದ ದೇಶಿಯ ವಿದ್ವಾಂಸರಾದ ಎಸ್.ಎಂ.ಪುಟ್ಟಣ್ಣ, ಬಿ.ಎನ್.ಯೋಗಿಶ್ವರಪ್ಪ, ಪ್ರೊ.ಲಕ್ಷ್ಮಣ್ ತೆಲಗಾವಿ, ಹುಲ್ಲೂರು ಶ್ರೀನಿವಾಸ ಜೊಯಿಸರು, ಮೀರಸಾಬಿಹಳ್ಳಿ ಶಿವಣ್ಣ ಇನ್ನೂ ಮುಂತಾದವರು ದೇಶಿ ಬರವಣಿಗೆಯಿಂದ ಚಿತ್ರದುರ್ಗದ ಪಾಳೆಯಗಾರರ ಚರಿತ್ರೆಗೆ ಆಕರಗಳು ಹೇಗೆ ಉಪಯುಕ್ತ ಆಗುತ್ತವೆ ಎಂಬುದನ್ನು ಸಾದರಪಡಿಸಿದರು.




ಹುಚ್ಚಯ್ಯ ಎಂ. ಅವರು ‘ಪಾಳೆಯಗಾರರ ಚರಿತ್ರೆ ದೇಶಿ ಬರವಣಿಗೆಗಳನ್ನು ಅನುಲಕ್ಷಿಸಿ’ ಎಂಬ ವಿಷಯವನ್ನು ಮಂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚರಿತ್ರೆ ವಿಭಾಗದ ಹಿರಿಯ ಪ್ರಾಧ್ಯಾಪಕರಾದ **ಡಾ.ವಿರೂಪಾಕ್ಷಿ ಪೂಜಾರಹಳ್ಳಿ** ಅವರು ವಹಿಸಿಕೊಂಡು ಪಾಳೆಯಗಾರರ ಚರಿತ್ರೆಯನ್ನು ಶಾಸನಗಳು, ಸ್ಮಾರಕಗಳು, ಕಾದಂಬರಿಗಳು, ಜನಪದ ಸಾಹಿತ್ಯದಲ್ಲಿ ಹಾಗೂ ಕನ್ನಡ ಕಾವ್ಯಗಳಲ್ಲಿ ಪಾಳೆಗಾರರ ಚರಿತ್ರೆಯನ್ನು ಮತ್ತು ಚರಿತ್ರೆಯ ದೃಷ್ಟಿಕೋನದಿಂದ ಆಧಾರ ಸಹಿತವಾದ ಚಿತ್ರದುರ್ಗ ಪಾಳೆಯಗಾರರ ಕುರಿತು ದೇಶೀಯ ಬರವಣಿಗೆ ಎಷ್ಟು ಮೌಲ್ಯಯುತವಾಗಿ ಹೊಸದೊಂದು ವಾದಕ್ಕೂ ಕೂಡದಾರಿ ಮಾಡಿಕೊಟ್ಟಿದೆ ಎಂಬುದನ್ನು ತಿಳಿಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಚರಿತ್ರೆ ವಿಭಾಗದ ಹಿರಿಯ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ **ಡಾ.ಕೆ.ಮೋಹನ್‌ಕೃಷ್ಣ ರೈ** ಅವರು ಹಾಗೂ ಹಿರಿಯ ಪ್ರಾಧ್ಯಾಪಕರಾದ **ಡಾ.ಎನ್.ಚಿನ್ನಸ್ವಾಮಿ ಸೋಸಲೆ** ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿವಿಧ ವಿಭಾಗದ ವಿದ್ಯಾರ್ಥಿಗಳು ಮತ್ತು ಚರಿತ್ರೆ ವಿಭಾಗದ ಸಂಶೋಧನಾ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಪಾಕ್ಷಿಕ ಮಾತು ಕಾರ್ಯಕ್ರಮದ ಸಂಚಾಲಕರಾದ ಪ್ರದೀಪ್ ಹೆಚ್. ನಿರೂಪಿಸಿದರು.

ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಪಾಕ್ಷಿಕ ಮಾತು – ೩೮

**ಅಧ್ಯಕ್ಷತೆ**
**ಡಾ.ವಿರೂಪಾಕ್ಷಿ ಪೂಜಾರಹಳ್ಳಿ**
ಹಿರಿಯ ಪ್ರಾಧ್ಯಾಪಕರು, ಚರಿತ್ರೆ ವಿಭಾಗ

**ವಿಷಯ**
**ಪಾಳೆಯಗಾರರ ಚರಿತ್ರೆ ; ದೇಶಿ ಬರವಣಿಗೆಗಳನ್ನು ಅನುಲಕ್ಷಿಸಿ**

**ವಿಷಯ ಮಂಡನೆ**
**ಹುಚ್ಚಯ್ಯ ಎಮ್**
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ

**ದಿನಾಂಕ:** ೦೭.೧೦.೨೦೨೪
**ಸಮಯ:** ಸಂಜೆ ೪:೦೦ ಗಂಟೆ
**ಸ್ಥಳ:** ನಳಂದ ಸಭಾಂಗಣ, ಚರಿತ್ರೆ ವಿಭಾಗ

**ಎಲ್ಲರಿಗೂ ಸ್ವಾಗತ**

**ಡಾ.ಕೆ.ಮೋಹನ್‌ಕೃಷ್ಣ ರೈ**
ಮುಖ್ಯಸ್ಥರು
ಚರಿತ್ರೆ ವಿಭಾಗ

**ಪ್ರದೀಪ ಹೆಚ್.**
ಸಂಚಾಲಕರು
ಪಿಎಚ್‌ಡಿ ವಿದ್ಯಾರ್ಥಿ

**ಡಾ.ವಿಜಯ್ ಪೂಣಚ್ಚ ತಂಬಂಡ**
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

---

**ಇವರಿಗೆ,**

ಮಾನ್ಯ ಕುಲಪತಿಗಳ ಆಪ್ತಶಾಖೆ, ಕ.ವಿ.ಹಂ.
ಮಾನ್ಯ ಕುಲಸಚಿವರ ಆಪ್ತಶಾಖೆ, ಕ.ವಿ.ಹಂ.
ಮಾನ್ಯ ನಿರ್ದೇಶಕರು, ಅಧ್ಯಯನಾಂಗ, ಕ.ವಿ.ಹಂ.
ಮಾನ್ಯ ನಿರ್ದೇಶಕರು, ಶೈಕ್ಷಣಿಕ, ಕವಿಹಂ